[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

IN THE COURT OF CIVIL JUDGE & J.M.F.C., KARKALA.

Criminal Case No. 661/2022

..................................................Vs...................................

ಸಾಕ್ಷಿದಾರನ ಹೆಸರು ಃ ನಾಗರಾಜ್ ನಾಯ್ಕ ಪಿ.ಡಬ್ಲ್ಯೂಃ 3

ತಂದೆಯ ಹೆಸರುಃ ಕೊಗ್ಗ ನಾಯ್ಕ ಸಿ.ಡಬ್ಲ್ಯೂಃ 3

ಪ್ರಾಯ ಃ 41 ವರ್ಷ

ಉದ್ಯೋಗ ಃ ಮುಖ್ಯ ಪೇದೆ, ಮಣಿಪಾಲ ಠಾಣೆ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 17.12.2024

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2014 ರಿಂದ 2021 ರವರೆಗೆ ಕಾರ್ಕಳ ನಗರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 16.12.2020 ರಂದು ನನ್ನನ್ನು ರೌಂಡ್ಸ್ ಕರ್ತವ್ಯಕ್ಕೆ ನೇಮಿಸಿದ್ದು ಆ ದಿನ ಚಾಸಾ-1 ರವರು ವಾಹನ ತಪಾಸಣೆಗೆ ಬರುವಂತೆ ತಿಳಿಸಿದ್ದು ನಾನು ಚಾಸಾ-1 ರವರೊಂದಿಗೆ ಇಲಾಖಾ ಜೀಪಿನಲ್ಲಿ ಮಿಯಾರು ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದಾಗ ಚಾಸಾ-2 ರವರನ್ನು ವಾಹನ ತಪಾಸಣೆ ಬರುವಂತೆ ತಿಳಿಸಿರುತ್ತಾರೆ. ಬೋರ್ಕಟ್ಟೆಯಲ್ಲಿ ವಾಹನ ತಪಾಸಣೆ ಮಾಡುತ್ತಿದಾಗ ಸಮಯ ಸುಮಾರು ಮಧ್ಯಾಹ್ನ 2.00 ಗಂಟೆಗೆ ಬೋರ್ಕಟ್ಟೆ ಕಡೆಯಿಂದ ಕಾರ್ಕಳ ಕಡೆಗೆ ಬೂದು ಬಣ್ಣದ ಕಾರಿನ ಚಾಲಕ ಸೀಟ್ ಬೆಲ್ಟ್ ಧರಿಸದೆ ಚಲಾಯಿಸಿಕೊಂಡು ಬರುತ್ತಿರುವುದನ್ನು ಚಾಸಾ-1 ರವರು ನೋಡಿ ಸದ್ರಿ ಕಾರನ್ನು ನಿಲ್ಲಿಸುವಂತೆ ಸೂಚಿಸಿದಾಗ ಚಾಲಕನು ಕಾರನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಕಾರಿನಿಂದ ಇಳಿದು ಬಂದಿದ್ದು ಆತನ ಹೆಸರು ಕೇಳಿದಾಗ ಆತನ ಹೆಸರು ಪ್ರಶಾಂತ್ ಆಚಾರ್ಯ ಎಂದು ತಿಳಿಸಿದನು. ಬಳಿಕ ಕಾರಿನ ದಾಖಲಾತಿಗಳನ್ನು ಕೇಳಿದಾಗ ಮನೆಯಲ್ಲಿ ಇರುವುದಾಗಿ ತಿಳಿಸಿದನು. ಚಾಸಾ-1 ರವರು ಅವರ ಮೊಬೈಲ್ ನಲ್ಲಿ ವಾಹನ ಸಮನ್ವಯ ಆ್ಯಪ್ ಮೂಲಕ ಪರಿಶೀಲಿಸಿದಾಗ ಸದ್ರಿ ವಾಹನದ ಮಾಲಕರು ದಕ್ಷಿಣ ಕನ್ನಡ

ಜಿಲ್ಲೆಯ ಬಂಟ್ವಾಳ ತಾಲೂಕಿನ ಮಂಚಿ ಎಂಬಲ್ಲಿ ವಾಸವಾಗಿರುವ ಮಾಲತಿ ಪೈ ಎಂಬುವವರ ಹೆಸರಿನಲ್ಲಿ ಇರುವುದು ಕಂಡುಬಂತು. ಬಳಿಕ ಸದ್ರಿ ಚಾಲಕನನ್ನು ವಿಚಾರಿಸಿದಾಗ ಆತನು 2016 ರಲ್ಲಿ ಮಂಗಳೂರು ಹುಂಡೈ ಶೋರ್ ರೂಮ್ ನಿಂದ ಕಾರನ್ನು ಖರೀದಿ ಮಾಡಿದ್ದು ಬಳಿಕ ಮಂಗಳೂರು ಆರ್ ಟಿ ಓ ಕಚೇರಿಯಲ್ಲಿ ತಾತ್ಕಲಿಕವಾಗಿ ನೊಂದಾಣಿ ಮಾಡಿದ್ದು ಬಳಿಕ ಶಾಶ್ವತ ನಂಬರನ್ನು ಮಾಡಿರುವುದಿಲ್ಲ ಎಂದು ತಿಳಿಸಿದನು. ಬಳಿಕ ಸದ್ರಿ ಕಾರಿಗೆ ಕಾರ್ಕಳದ ಟಿ ಎ ಪಿ ಎಂ ಸಿ ಬ್ಯಾಂಕ್ ನಿಂದ ಸಾಲವನ್ನು ಪಡೆದಿರುವುದಾಗಿ ಹಾಗೂ ಸದ್ರಿ ಬ್ಯಾಂಕ್ ನಲ್ಲಿ ಒಂದು ಲಕ್ಷ ರೂ. ಬಾಕಿ ಇರುವುದಾಗಿ ತಿಳಿಸಿದನು. ಸದ್ರಿ ಕಾರಿಗೆ ಉಡುಪಿ-ಹಿರಿಯಡ್ಕ ರಸ್ತೆ ಮಧ್ಯೆ ಸ್ಟಿಕರ್ ಅಂಗಡಿಯಲ್ಲಿ ಕೆಎ-20-ಎಂ ಸಿ 6342 ನಕಲಿ ನಂಬರ್ ಪ್ಲೇಟ್ ನ್ನು ತಾನೆ ಕಾರಿಗೆ ಅಳವಡಿಸಿರುವುದಾಗಿ ತಿಳಿಸಿರುತ್ತಾನೆ. ಚಾಲಕನು ಸರಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುವುದಾಗಿ ತಿಳಿದು ಬಂದ ಮೇರೆಗೆ ಚಾಸಾ-1 ರವರು ಠಾಣೆಗೆ ಕರೆ ಮಾಡಿ ಠಾಣಾ ಮುಂದಿನ ಅಪರಾಧ ಕ್ರಮಾಂಕವನ್ನು ಖಚಿತಪಡಿಸಿಕೊಂಡು ಬಳಿಕ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಸದ್ರಿ ಕಾರನ್ನು ಮಹಜರು ಮುಖೇನ ಸ್ವಾಧೀನಪಡಿಸಿಕೊಳ್ಳಲಾಯಿತು. ಮಹಜರನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಸ್ಥಳದಲ್ಲಿ ತಯಾರಿಸಲಾಯಿತು. ಮಹಜರಿಗೆ ಸಹಿ ಮಾಡಿರುತ್ತೇನೆ. ನಂತರ ಆರೋಪಿ ಮತ್ತು ಕಾರನ್ನು ಮುಂದಿನ ತನಿಖೆ ಬಗ್ಗೆ ಠಾಣೆಗೆ ತಂದಿರುತ್ತೇವೆ. ಪ್ರಕರಣದ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ರಿಂದ 6 ಭಾವಚಿತ್ರ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು ಮಾ-1 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಕೆ ಎಸ್ ವಕೀಲರಿಂದಃ

ತಕ್ಷೀರು ಆಗಿದೆ ಎಂದು ಹೇಳುವ ದಿನ ಜೀಪು ಚಾಲಕ ಸತೀಶ್ , ಚಾಸಾ-1 ಮತ್ತು ನಾನು ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ. ಠಾಣೆಯಿಂದ ನೇರವಾಗಿ ಬೋರ್ಕಟ್ಟೆಗೆ ಹೋಗಿರುತ್ತೇವೆ. ಆರೋಪಿಯ ವಾಹನ ತಪಾಸಣೆ ಮಾಡುವ ಪೂರ್ವದಲ್ಲಿ ಎಷ್ಟು ವಾಹನಗಳನ್ನು ತಪಾಸಣೆ ಮಾಡಲಾಗಿದೆ ಎಂದು ಗೊತ್ತಿಲ್ಲ. ವಾಹನ ತಪಾಸಣೆ ಮಾಡಿದ ಬಗ್ಗೆ

ದಾಖಲೆಗಳನ್ನು ನಿರ್ವಹಣೆ ಮಾಡಿರುತ್ತೇವೆ. ನಿರ್ವಹಣೆ ಮಾಡಿದ ದಾಖಲೆಯಲ್ಲಿ ಆರೋಪಿ ವಾಹನ ತಪಾಸಣೆ ಮಾಡಿದ ಬಗ್ಗೆ ನಮೂದಿಸಿರುವುದಿಲ್ಲ. ತಪಾಸಣೆ ಮಾಡುವ ಸಮಯದಲ್ಲಿ ಒಬ್ಬರು ವಾಹನವನ್ನು ನಿಲ್ಲಿಸುತ್ತಾರೆ ಮತ್ತು ಇನ್ನೊಬ್ಬರು ಬೇರೆ ವಾಹನವನ್ನು ಪರಶೀಲಿಸುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ವಾಹನವನ್ನು ನಿಲ್ಲಿಸುತ್ತಿದ್ದೆ ಮತ್ತು ಚಾಸಾ-1 ರವರು ತಪಾಸಣೆ ಮಾಡುತ್ತಿದ್ದರು. ನಾನು ವಾಹನವನ್ನು ನಿಲ್ಲಿಸುತ್ತಿದ್ದ ಕಾರಣ ಚಾಸಾ-1 ರವರು ಯಾವ ರೀತಿ ವಾಹನ ತಪಾಸಣೆ ಮಾಡುತ್ತಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. ಕಾರಿನ 2 ನಂಬರ್ ಪ್ಲೇಟ್ ಗಳು ಸರಿ ಇದ್ದವು. ಚಾಸಾ-9 ಮತ್ತು 10 ರವರನ್ನು ಕರೆ ಮಾಡಿ ಸ್ಥಳಕ್ಕೆ ಕರೆಸಲಾಗಿರುತ್ತದೆ. ಅವರು ನಮ್ಮ ಠಾಣೆಯ ಖಾಯಂ ಸಾಕ್ಷಿಗಳು ಎಂದರೆ ಗೊತ್ತಿಲ್ಲ. ಬೋರ್ಕಟ್ಟೆ ಸ್ಥಳದಲ್ಲಿ ಬೇರೆ ಸಾಕ್ಷಿದಾರರು ಸಿಗುತ್ತಾರೆ ಎಂದರೆ ಸಾಕ್ಷಿಯು ಆ ಸಮಯಲ್ಲಿ ಇರಲಿಲ್ಲ. ಚಾಸಾ-9 ಮತ್ತು 10 ರವರು ಕಾರ್ಕಳದವರು ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಯಾರು ದೂರು ನೀಡಿರುತ್ತಾರೆ ಎಂದು ಗೊತ್ತಿಲ್ಲ. 3.00 ರಿಂದ 4.00 ಗಂಟೆಯವರೆಗೆ ಮಹಜರು ಮಾಡಿರುತ್ತೇವೆ. ಚಾಸಾ-9 ಮತ್ತು 10 ರವರನ್ನು ಚಾಸಾ-1 ರವರು ನೋಟಿಸು ನೀಡಿ ಬರ ಮಾಡಿಕೊಂಡಿರತ್ತಾರೆ. ಇಲಾಖಾ ವಾಹನದಲ್ಲಿ ಹೋದ ಸಮಯದಲ್ಲಿ ಜೀಪು ಚಾಲಕ, ಚಾಸಾ-1 ಮತ್ತು ನನ್ನನ್ನು ಹೊರತು ಪಡಿಸಿ ಬೇರೆ ಯಾವುದೇ ಸಿಬ್ಬಂದಿಗಳು ಬಂದಿರುವುದಿಲ್ಲ ಎಂದರೆ ಚಾಸಾ-16 ರವರು ಬಂದಿರುತ್ತಾರೆ. 2 ನಂಬರ್ ಪ್ಲೇಟ್ ಗಳನ್ನು ಸ್ಥಳದಲ್ಲಿಯೇ ಕಳಚಲಾಗಿದೆ ಆ ನಂತರ ವಾಹನವನ್ನು ನಮ್ಮ ಇಲಾಖಾ ಸಿಬ್ಬಂದಿ ಠಾಣೆಗೆ ಚಲಾಯಿಸಿಕೊಂಡು ತಂದಿರುತ್ತಾರೆ. ನಿಪಿ-4 ರಿಂದ 6 ನ್ನು ಠಾಣೆಯಲ್ಲಿ ತೆಗೆಯಲಾಗಿದೆ. ನಿಪಿ-4 ರಿಂದ 6 ರಲ್ಲಿ ನಂಬರ್ ಪ್ಲೇಟ್ ಗಳನ್ನು ಕಳಚಿದ ಬಗ್ಗೆ ಕಂಡು ಬಂದಿರುವುದಿಲ್ಲ ಎಂದರೆ ಸರಿ. ವಾಹನಕ್ಕೆ ಸಂಬಂಧಿಸಿದಂತೆ ನಾನು ವಾಹನದ ದಾಖಲೆಗಳನ್ನು ನೋಡಲು ಪ್ರಯತ್ನಿಸಿರುವುದಿಲ್ಲ. ವಾಹನದ ವಿಚಾರಣೆ ಮತ್ತು ತಪಾಸಣೆ ಮಾಡುವ ಸಮಯದಲ್ಲಿ ಆರೋಪಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಚಾಸಾ-1 ರವರು ಹೇಳಿದ ಮೇರೆಗೆ ನಿಪಿ-3 ದಾಖಲೆಗೆ ಸಹಿ ಮಾಡಿರುತ್ತೇನೆ. ತಕ್ಷೀರು ಸ್ಥಳ ಮಹಜರು ಮತ್ತು ಸ್ವತ್ತು ಸ್ವಾಧೀನತ ಮಹಜರು ಒಂದೇ ಆಗಿರುತ್ತದೆ. ಆರೋಪಿ ಗ್ರಾಮ ಪಂಚಾಯತ್ ಚುನಾವಣೆ ಪ್ರತ್ಯೇಕವಾಗಿ ಸ್ವರ್ಧೆ ಮಾಡಿದ್ದರಿಂದ ಹಲವರು ನಮ್ಮ ಮೇಲೆ ರಾಜಕೀಯ

ಒತ್ತಡ ಬೀರಿ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಮು ಮಾ-1 ಕ್ಕೂ ಅರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-3 ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ